

188 ದಿನಗಳ, 17000 ಸಾಗರ ಮೈಲಿಗಳ ಪಯಣದಿಂದ ಮರಳಿದ ಸಿಬ್ಬಂದಿಗೆ ಗೋವಾದಲ್ಲಿ ದೊರೆತ ಸ್ವಾಗತ

# ಸಾಗರ ಧೀರೆಯರು

**ಧೈರ್ಯ ಎನ್ನುವುದು ಭಯದ ಅನುಪಸ್ಥಿತಿಯಲ್ಲ,
ಅದರ ಮೇಲಿನ ದಿಗ್ವಿಜಯ.
–ನೆಲ್ಸನ್ ಮಂಡೇಲಾ**

## ಬಾಹ್ಯಾಕಾಶ ಪರ್ಯಟನೆ ಸುದ್ದಿಗಳ ನಡುವೆ ಸಾಗರಯಾನದ ಸಾಹಸ

**ಭಾರತೀಯ ನೌಕಾಪಡೆಯ ಮಹಿಳಾ ಅಧಿಕಾರಿಗಳಾದ ಡಿಲ್ನ ಕೆ. ಹಾಗೂ ರೂಪ ಅಳಗಿರಿ ಸ್ವಾಮಿ ಎರಡು ತಿಂಗಳ ಕಾಲ ಐಎನ್‌ಎಸ್‌ವಿ 'ತಾರಿಣಿ'ಯಲ್ಲಿ ಸಾಗರಯಾನ ಮಾಡಿ ಹಿಂದಿರುಗಿದ್ದಾರೆ. ಇಬ್ಬರಲ್ಲೊಬ್ಬರು 'ಸಾಗರ ಪರಿಕ್ರಮ–4' ವಿಶ್ವ ಪರ್ಯಟನೆಗೆ ಆಯ್ಕೆಯಾಗಲಿದ್ದಾರೆ.**

■ ಗುರುರಾಜ್ ಎಸ್. ದಾವಣಗೆರೆ

ಭಾರತ ಮೂಲದ ಮಹಿಳಾ ಗಗನಯಾತ್ರಿ ಸುನೀತಾ ವಿಲಿಯಮ್ಸ್ ಮತ್ತೊಮ್ಮೆ ಅಂತರಿಕ್ಷಯಾನ ಶುರು ಮಾಡಿದ್ದನ್ನು ಭಾರತದ ಎಲ್ಲ ಪತ್ರಿಕೆಗಳು ಮುಖಪುಟದಲ್ಲಿ ವರದಿ ಮಾಡಿ ಬೀಗಿದವು. ಈ ಸಮಯಕ್ಕೆ ಮೂರು ವಾರಗಳ ಮುಂಚೆ ನಮ್ಮವರೇ ಆದ, ಭಾರತೀಯ ನೌಕಾಸೇನೆಗೆ ಸೇರಿದ ಇಬ್ಬರು ಮಹಿಳಾ ಅಧಿಕಾರಿಗಳು ಅಪರೂಪದ ಐತಿಹಾಸಿಕ ಸಾಧನೆಯೊಂದನ್ನು ಮಾಡಿದ್ದರು. ಇದು ಯಾವ ಪತ್ರಿಕೆಯಲ್ಲೂ ಮುಖಪುಟದ ಸುದ್ದಿಯಾಗಿ ರಾರಾಜಿಸಲಿಲ್ಲ. ದೃಶ್ಯ ಮಾಧ್ಯಮಗಳು ಅತ್ತ ಕಡೆ ತಲೆ ಹಾಕಲೇ ಇಲ್ಲ.

ದೇಶದ ಪ್ರತಿಷ್ಠಿತ ನೌಕಾದಳದ ಮಹಿಳಾ ಅಧಿಕಾರಿಗಳಾದ ಲೆಫ್ಟಿನೆಂಟ್ ಕಮಾಂಡರ್ ಡಿಲ್ನ ಕೆ. ಮತ್ತು ರೂಪ ಅಳಗಿರಿ ಸ್ವಾಮಿ– ಇಬ್ಬರೂ ಬರೋಬ್ಬರಿ ಎರಡು ತಿಂಗಳ ಕಾಲ ಹಾಯಿದೋಣಿ ಐಎನ್‌ಎಸ್‌ವಿ 'ತಾರಿಣಿ'ಯಲ್ಲಿ ಕುಳಿತು ಸಾಗರ ಯಾನ ಮಾಡಿ ಯಶಸ್ವಿಯಾಗಿ ಹಿಂದಿರುಗಿದ್ದಾರೆ. ಫೆಬ್ರುವರಿ 28ರಂದು ಗೋವಾದ ಮಾಂಡೋವಿ ದೋಣಿ ಕೇಂದ್ರದಿಂದ ಹೊರಟು 21 ದಿನಗಳ ಸುದೀರ್ಘ ಪಯಣದ ನಂತರ ಹಿಂದೂ ಮಹಾಸಾಗರವನ್ನು ದಾಟಿ, ಮಾರ್ಚ್ 21ರಂದು ಮೊರಿಶಿಯಸ್‌ನ ಪೋರ್ಟ್ ಲೂಯಿಸ್ ಬಂದರು ತಲುಪಿ ಐತಿಹಾಸಿಕ ಸಾಧನೆ ಮಾಡಿದ್ದಾರೆ.

ರೂಪ ಮತ್ತು ಡಿಲ್ನ ಕಳೆದ ಮೂರು ವರ್ಷಗಳಿಂದ ಸಮುದ್ರದ ತೆರೆಗಳ ಮೇಲೆ ಇದ್ದು ಸಾಕಷ್ಟು ತರಬೇತಿ ಮತ್ತು ಅನುಭವ ಎರಡನ್ನು ಸಂಪಾದಿಸಿದವರು. ಈಗಾಗಲೇ 25000 ಸಾಗರ ಮೈಲಿಗಳ ಪಯಣದ ಅನುಭವ ಅವರದು. ಇಬ್ಬರೂ ಕಳೆದ ನವೆಂಬರ್‌ನಲ್ಲಿ ಗೋವಾದಿಂದ ಪೋರ್ಟ್ ಬ್ಲೇರ್‌ವರೆಗೆ ಹೋಗಿ ಬಂದಿದ್ದರು. ಪಯಣವೆಲ್ಲ ಭಾರತದ ನೀರಿನ ಮೇಲೆಯೇ ನಡೆದಿತ್ತು. ಈಗಲೂ ಸಹ ಗೋವಾದಿಂದ ಮೊರಿಶಿಯಸ್‌ವರೆಗೆ ಅಷ್ಟೇ ದೂರ ಕ್ರಮಿಸಿ ಹಿಂದಿರುಗಿದ್ದಾರೆ. ವಿಶೇಷವೆಂದರೆ, ಈ ಬಾರಿ ನಮ್ಮ ನೀರನ್ನು ದಾಟಿ ಪಯಣಿಸಿ ಹಿಂದಿರುಗಿರುವುದು ಭಾರತೀಯ ನೌಕಾದಳದ ದೊಡ್ಡ ಸಾಧನೆಗಳಲ್ಲೊಂದು. ಯಾನ ಮುಗಿಸಿ ಯಶಸ್ವಿಯಾಗಿ ಹಿಂದಿರುಗಿ ಏಪ್ರಿಲ್ 24ಕ್ಕೆ ಪಯಣ ಪ್ರಾರಂಭಿಸಿದ್ದ ಜಾಗಕ್ಕೆ ಬಂದು ತಲುಪಿದ್ದಾರೆ.

### ನಾರಿಶಕ್ತಿಯ ಅನಾವರಣ

'ನಾವಿಕಾ ಸಾಗರ ಪರಿಕ್ರಮ' ಯೋಜನೆಯ ಉದ್ದೇಶವೇ ಮಹಿಳಾ ನಾವಿಕರನ್ನು ಸಾಗರ